ಸಿ.ಸಿ ನಂಬ್ರ: 242/2023
ಪಿ.ಡಬ್ಲ್ಯೂ : 1

ದಿನಾಂಕ: 10-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ

1. ನಾನು ಮುಂಚೆ ಪಿ.ಸಿ.ಎ .ಆರ್.ಡಿ ಬ್ಯಾಂಕ್ ನಲ್ಲಿ ನೌಕರನಾಗಿದ್ದೆ. 2019 ನವೆಂಬರ್ ನಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಿವೃತ್ತಿ ಹೊಂದುವಾಗ ನನ್ನ ಒಟ್ಟು ನಿವ್ವಳ ಸಂಬಳ 48,000/- ರೂ. ಇತ್ತು. ನಿವೃತ್ತಿ ಹೊಂದಿದ ನಂತರ ಉದ್ಯೋಗ ಶುರು ಮಾಡಿರುತ್ತೇನೆ, ಫೈನಾನ್ಸ್ ಮತ್ತು ಕೃಷಿ ಕೆಲಸ ಮಾಡುತ್ತಿರುತ್ತೇನೆ. ಚಿರಂಜೀವಿ ಫೈನಾನ್ಸ್ ಹಾಗೂ ಇನ್ ವೆಸ್ಟ್ ಮೆಂಟ್ ಎಂಬ ಫೈನಾನ್ಸ್ ಇರುತ್ತದೆ. ಅದನ್ನು 1996 ರಲ್ಲಿ ಶುರು ಮಾಡಿರುತ್ತೇನೆ. ಅದು ಪಾಲುದಾರ ಸಂಸ್ಥೆ ಇರುತ್ತದೆ. ಪ್ರಭಾಕರ ಶೆಟ್, ಸುಂದರ್ ಎಸ್ ಕುಂದರ್, ಕೃಷ್ಣಮೂರ್ತಿ ಭಟ್, ಜನಾರ್ಧನ, ವನಜಾಕ್ಷಿ ಶೆಟ್ಟಿ ಇವರುಗಳು ಪಾಲುದಾರರಿರುತ್ತಾರೆ.

2. ಆ ಫೈನಾನ್ಸ್ ಗೂ ನನಗೂ ಆಗ ಸಂಬಂಧ ಇರಲಿಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ಲೇವಾದೇವಿ ವ್ಯವಹಾರ ಮಾಡದೇ ಇರುವುದರಿಂದ ಪರವಾನಿಗೆ ಇರುವುದಿಲ್ಲ. ಕುಂದಾಪುರ ನ್ಯಾಯಲಯದಲ್ಲಿ ನನ್ನ ವ್ಯಯಕ್ತಿಕ ಹಿನ್ನಲೆಯಲ್ಲಿ ಈ ಪ್ರಕರಣ ಸೇರಿ ಒಟ್ಟು 3 ಚೆಕ್ ಅಮಾನ್ಯ ಪ್ರಕರಣ ಸಲ್ಲಿಸಿರುತ್ತೇನೆ. ಒಂದು 2013 ರಲ್ಲಿ, ಒಂದು 2021 ರಲ್ಲಿ, ಮತ್ತೊಂದು ಮೇ 2026 ರಲ್ಲಿ.

3. ಆರೋಪಿತ ನಾನು ಕೆಲಸ ಮಾಡುವ ಸಮಯದಲ್ಲಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ಅವರು 18 ವರ್ಷದಿಂದ ಆ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುತ್ತಾರೆ. ನಾನು ಆರೋಪಿಗೆ ಹಣ ಕೊಟ್ಟ ಬಗ್ಗೆ ದಾಖಲೆ ಇರುವುದಿಲ್ಲ. ನಗದು ಹಣವನ್ನು ಕೊಟ್ಟಿರುತ್ತೇನೆ. ಹಣವನ್ನು ಆರೋಪಿತಳಿಗೆ ನಮ್ಮ ಮನೆಯಲ್ಲಿ ಕೊಟ್ಟಿರುತ್ತೇನೆ. ದಿನಾಂಕ 28-03-2021 ರಲ್ಲಿ ಆಕೆ ನನಗೆ ಹಣ ಕೇಳಿದ್ದು, ನಾನು ದಿನಾಂಕ 30-03-2021 ರಲ್ಲಿ ಹಣ ಕೊಟ್ಟಿರುತ್ತೇನೆ. ಆಕೆ ಹಣ ಕೇಳಿದ ದಿನ ನನ್ನ ಬಳಿ ಹಣ ಇರಲಿಲ್ಲ. ಆದ ಕಾರಣ ನಾನು 28 ನೇ ತಾರೀಖಿನಂದು ಹಣ ಕೊಟ್ಟಿರುವುದಿಲ್ಲ.

4. ನನ್ನ ಹೆಂಡತಿ ಮನೆಯಲ್ಲಿದ್ದ ಹಣವನ್ನು ತಂದು ಆರೋಪಿತಳಿಗೆ ಕೊಟ್ಟಿರುತ್ತೇನೆ. ನನ್ನ ಹೆಂಡತಿ ಮನೆ ಇರುವುದು ನಾವುಂದದಲ್ಲಿ. ನಾವುಂದದ ನನ್ನ ಹೆಂಡತಿ ಮನೆಯಲ್ಲಿ ನಾನು ಇಟ್ಟಿದ್ದ ಹಣವನ್ನು ತಂದು ಕೊಟ್ಟಿರುತ್ತೇನೆ. ದಾಖಲೆ ಮಾಡಿಕೊಳ್ಳಲು ತೊಂದರೆ ಇರಲಿಲ್ಲ ಸಾಕ್ಷಿ ಒಂದೇ ಸಂಸ್ಥೆಯಲ್ಲಿ ನಾವಿಬ್ಬರೂ ಕೆಲಸ ಮಾಡುತ್ತಿದ್ದು ಆಕೆ 3 ತಿಂಗಳಲ್ಲಿ ಹಣ ಕೊಡುತ್ತೇನೆ ಎಂದು ಹೇಳಿದ್ದಳು ಎಂದು ನುಡಿಯುತ್ತಾರೆ.

5. ಆಕೆ ಜರೂರು ಇದೆ ಎಂದು ಹಣ ಕೇಳಿರುತ್ತಾರೆ. ಯಾವ ಉದ್ದೇಶಕ್ಕೆ ಹಣ ಕೇಳಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆದರೆ ಆಸ್ತಿಯನ್ನು ಮಾರಾಟ ಮಾಡಿದ್ದು ಪೂರ್ತಿ ಹಣ ಬಂದ ಮೇಲೆ ನಿಮಗೆ ಹಣ ಕೊಡುತ್ತೇನೆ ಎಂದು ಹೇಳಿದ್ದಳು. ನಾನು ಹಣ ಕೊಡುವಾಗ ಬೇರೆ ಯಾರು ಇರಲಿಲ್ಲ. ಹಣ ಕೊಟ್ಟ 3 ತಿಂಗಳ ನಂತರ ಅವರು ನನಗೆ ಚೆಕ್ ತಂದು ಕೊಟ್ಟಿರುತ್ತಾರೆ. ಚೆಕ್ ವಾಪಾಸು ಬಂದ 11 ನೇ ದಿನಕ್ಕೆ ನಾನು ನೋಟಿಸು ಕೊಟ್ಟಿರುತ್ತೇನೆ. ಜನವರಿ 11,2022 ರಂದು ಅವರಿಗೆ ನಾನು ನೋಟಿಸು ಕೊಟ್ಟಿರುತ್ತೇನೆ.

6. ನಾನು ಅವರಿಗೆ ಬಡ್ಡಿಗೆ ಹಣ ಕೊಟ್ಟಿರುವುದಿಲ್ಲ. ನಾನು ಸಲ್ಲಿಸಿದ 3 ಪ್ರಕರಣದಲ್ಲಿ ಸಹ ಬಡ್ಡಿಗೆ ಹಣ ಕೊಟ್ಟಿರುವುದಿಲ್ಲ. ಸುಲೋಚನಾರವರು ಕೊಟ್ಟಂತಹ ಚೆಕ್ ಯಾರ ಕೈ ಬರಹದಲ್ಲಿರುತ್ತದೆ ಎಂದು ಗೊತ್ತಿರುವುದಿಲ್ಲ. ನಿ.ಪಿ.1 ರಲ್ಲಿ ಬರೆದಿರುವ ಕೈ ಬರಹ ಯಾರದ್ದು ಎಂದು ಗೊತ್ತಿರುವುದಿಲ್ಲ, ಆಕೆಯೇ ನನ್ನ ಮುಂದೆ ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿ ಬರೆದಿರುವ ತಾರೀಖು, ಮೊತ್ತದ ಇಂಕಿನ ಶಾಯಿಗೂ ಹಾಗೂ ಸಹಿ ಇರುವ ಇಂಕಿನ ಶಾಯಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಾನು ಆ ಬರಹಗಳನ್ನು ಯಾರು ಮತ್ತು ಎಲ್ಲಿ ಬರೆದಿದ್ದು ಎಂದು ಕೇಳಿರುವುದಿಲ್ಲ.

7. ಚೆಕ್ ನಲ್ಲಿ ನಮೂದಿಸಿರುವ ದಿನಾಂಕದಂದೇ ಚೆಕ್ ನನ್ನ ಸ್ವಾಧೀನಕ್ಕೆ ಬಂದಿರುತ್ತದೆ. ಕಲೆಕ್ಷನ್ ಗೆ 2 ತಿಂಗಳ ನಂತರ ಬ್ಯಾಂಕಿಗೆ ಹಾಕಿರುತ್ತೇನೆ. ಆಕೆ ಹಣ ಕೊಡುತ್ತೇನೆ, ಕೊಡುತ್ತೇನೆ ಎಂದು ಹೇಳಿದ್ದರಿಂದ 2 ತಿಂಗಳ ನಂತರ ಬ್ಯಾಂಕಿಗೆ ಹಾಜರು ಪಡಿಸಿರುತ್ತೇನೆ. ಚೆಕ್ ನನ್ನ ಸ್ವಾಧೀನಕ್ಕೆ ಬಂದಾಗ ಆಕೆ ನನ್ನ ಖಾತೆಯಲ್ಲಿ ಹಣ ಇರುವುದಿಲ್ಲ ಎಂದು ಹೇಳಿರುತ್ತಾಳೆ. ನಾನು ಎರಡು ತಿಂಗಳು 26 ದಿನ ಬ್ಯಾಂಕಿಗೆ ಚೆಕ್ ಹಾಕಲು ಕಾದಿರುತ್ತೇನೆ. ಆಕೆ ನಾನು ಚೆಕ್ ನ್ನು ಬ್ಯಾಂಕಿಗೆ ಹ ಹಾಕುವ ಪೂರ್ವದಲ್ಲಿ ಆಕೆ ಖಾತೆಯಲ್ಲಿ ಹಣ ಇರುತ್ತದೆ, ಬ್ಯಾಂಕಿಗೆ ಹಾಜರು ಪಡಿಸಿ ಎಂದು ಹೇಳಿರುತ್ತಾಳೆ. ನಾನು ಚೆಕ್ ನ್ನು ಬ್ಯಾಂಕಿಗೆ ಹಾಕುವ 1 ದಿನದ ಪೂರ್ವದಲ್ಲಿ ಹೇಳಿರುತ್ತಾಳೆ, ಆದ ಕಾರಣ ಬ್ಯಾಂಕಿಗೆ ಚೆಕ್ ನ್ನು ಹಾಕಿರುತ್ತೇನೆ.

8. ಚೆಕ್ ನ್ನು ಕೊಡುವಾಗ ಹಣ ಇಲ್ಲ ಎಂದು ಹೇಳಿದ್ದು, ಚೆಕ್ ನ್ನು ಹಾಜರು ಪಡಿಸುವಾಗ ಹಣ ಇದೆ ಎಂದು ಹೇಳಿದ್ದ ಬಗ್ಗೆ ನಿ.ಪಿ.3 ರಲ್ಲಿ ಕಾಣಿಸಿರುವುದಿಲ್ಲ. ನಿ.ಪಿ.3 ರಲ್ಲಿ ದಿನಾಂಕವನ್ನು ಡಿಸೆಂಬರ್ 2021 ಎಂದು ಬೆರಳಚ್ಚು ಇದ್ದು ಕೈ ಬರಹದಲ್ಲಿ ದಿನಾಂಕ 10-01-2022 ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಅದನ್ನು ಮುಂಚಿತವಾಗಿ ಬೆರಳಚ್ಚು ಮಾಡಿಸಿದ್ದಕ್ಕೆ ಯಾವುದೇ ಕಾರಣ ಇರುವುದಿಲ್ಲ.

9.ನಿ.ಪಿ.3 ರಲ್ಲಿ ಹೆಂಡತಿ ಮನೆಯಿಂದ ಹಣ ತಂದು ಕೊಟ್ಟಿರುತ್ತೇನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. 3 ತಿಂಗಳ ಒಳಗೆ ಆರೋಪಿತಳು ಹಣ ವಾಪಾಸು ಕೊಡುತ್ತೇನೆ ಎಂದು ಹೇಳಿದ ವಿಚಾರವನ್ನು ನಿ.ಪಿ.3 ನೋಟಿಸಿನಲ್ಲಿ ಹೇಳಿದ ಬಗ್ಗೆ ನೆನಪಿರುವುದಿಲ್ಲ , ದೂರಿನಲ್ಲಿ ಈ ವಿಚಾರ ಹೇಳಲಾಗಿರುತ್ತದೆ. 3 ತಿಂಗಳಲ್ಲಿ ಹಣ ಬರಲಿಲ್ಲ ಎಂದು ನಾನು ಯಾವುದೇ ನೋಟಿಸು ಕೊಟ್ಟಿರುವುದಿಲ್ಲ. ನಾನು ಕರೆ ಮಾಡಿ ಹಾಗೂ ಮೌಖಿಕವಾಗಿ ಹಣ ಕೊಡಿ ಎಂದು ಕೇಳಿರುತ್ತೇನೆ. 6 ತಿಂಗಳಲ್ಲಿ ಹಣ ಕೊಡುತ್ತಾರೆ ಅಂತ ಆರೋಪಿತಳು ನನಗೆ ಹೇಳಿರುತ್ತಾಳೆ ಅಂತ ನಾನು ವಕೀಲರಿಗೆ ಹೇಳಿರುತ್ತೇನೆ. ನನ್ನ ಪ್ರಕಾರ ಆರೋಪಿತಳು 6 ತಿಂಗಳಲ್ಲಿ ಹಣ ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

10. ಆರೋಪಿತಳು ಚೆಕ್ ಕೊಟ್ಟ ದಿನ ಖಾತೆಯಲ್ಲಿ ಹಣ ಇಲ್ಲ ಎಂದು ನನಗೆ ಹೇಳಿದ ಬಗ್ಗೆ ದೂರಿನಲ್ಲಿ ಕಾಣಿಸಿರುವುದಿಲ್ಲ. ಆಸ್ತಿ ಮಾರಾಟ ಮಾಡಿ ಹಣ ಕೊಡುತ್ತೇನೆ ಎಂದು ಹೇಳಿದ್ದಳು, ಆಸ್ತಿ ಮಾರಾಟವಾಗಿದೆ ಅಂತೆ, ಆಕೆ ಹಣ ಕೊಟ್ಟಿರುವುದಿಲ್ಲ. ನನಗೆ ಈ ವಿಚಾರ ಅವರ ಮನೆ ಪಕ್ಕದವರು ಹೇಳಿರುತ್ತಾರೆ. ಆ ದಾಖಲೆ ನಾನು ನ್ಯಾಯಲಯಕ್ಕೆ ಕೊಟ್ಟಿರುವುದಿಲ್ಲ. ನನಗೆ ಆರೋಪಿತಳ ಹಣಕಾಸಿನ ಬಗ್ಗೆ ಮಾಹಿತಿ ಇರುತ್ತದೆ, ಆಕೆ ನನ್ನ ಸಹ ಸಿಬ್ಬಂದಿ ಇರುತ್ತಾರೆ. ಆಕೆ ವಾಸ ಇರುವ ಮನೆ ಅವರ ತಂದೆ -ತಾಯಿ ಬಾಬ್ತು ಮನೆ ಎಂದರೆ ಸಾಕ್ಷಿ ಆಕೆ ಆ ಮನೆಯನ್ನು ಆಕೆಯ ಹೆಸರಿನಲ್ಲಿ ಮಾಡಿಕೊಂಡು ಸಾಲ ತೆಗೆದುಕೊಂಡಿದ್ದಳು, ನಾನೇ ಬ್ಯಾಂಕಿನಲ್ಲಿದ್ದಾಗ ಆ ಮನೆಯ ಮೇಲೆ ಸಾಲ ಮಂಜೂರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

11. ನನಗೆ ಆ ಮನೆ ಬೇರೆ ಬ್ಯಾಂಕಿನಲ್ಲಿ ಹರಾಜು ಆದ ಬಗ್ಗೆ ಗೊತ್ತಿರುವುದಿಲ್ಲ. ಮಂಜೂರು ಮಾಡಿದ ಹಣವನ್ನು ಆಕೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿ.ಪಿ.1(ಎ) ರ ಸಹಿನ ಪ್ರಾಯಕ್ಕೂ ಉಳಿದ ಮಾಹಿತಿ ಬರೆದಿರುವ ಪ್ರಾಯಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1(ಎ) ಹಾಗೂ ಉಳಿದ ಮಾಹಿತಿ ಬೇರೆ ಬೇರೆ ವರ್ಷಗಳಲ್ಲಿ ಬರೆದಿದ್ದು ಎಂದರೆ ಸಾಕ್ಷಿ ಆ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

12. ನಿ.ಪಿ.1 ರಲ್ಲಿ ಬರೆದಿರುವ ಕೈ ಬರಹ ಆರೋಪಿಯದ್ದಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರ ಕೈ ಬರಹ ನೋಡಿರುತ್ತೇನೆ, ಆದರೆ ಅವರ ಬರಹವೇ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಪಿ.1 ರಲ್ಲಿ ಬರೆದಿರುವ ಹೆಸರು, ಮೊತ್ತವನ್ನು ನಾನೇ ಬರೆಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ನಾನು ಬರೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

13. ನಿ.ಪಿ.1 ರ ಚೆಕ್ 2021 ರ ಬಹಳ ಹಿಂದಿನ ಚೆಕ್ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕುಂದಾಪುರದ ನ್ಯಾಯಲಯ ಹಾಗೂ ಬೇರೆ ಬೇರೆ ನ್ಯಾಯಲಯದಲ್ಲಿ ಒಟ್ಟು 40 ಕ್ಕೂ ಹೆಚ್ಚು ಚೆಕ್ ಅಮಾನೀಕರಣ ಪ್ರಕರಣ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ 18 ಪ್ರಕರಣವನ್ನು ಪೈನಾನ್ಸ್ ನಿಂದ ಸಲ್ಲಿಸಿರುತ್ತೇನೆ, 3 ಪ್ರಕರಣ ವ್ಯಯಕ್ತಿಕ ನೆಲೆಯಲ್ಲಿ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬ್ಯಾಂಕಿನಲ್ಲಿ ಕೆಲಸ ಮಾಡುವಾಗ ಲೇವಾದೇವಿ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಲೇವಾದೇವಿ ವ್ಯವಹಾರ ಮಾಡಿರುತ್ತೇನೆ ಎಂದು ಆರೋಪ ಇರುತ್ತದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದುವರಿದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ